ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ಪ್ರಟಕಣೆಯ ಕೃಪೆಗಾಗಿ

**ಕಾವ್ಯಗಳನ್ನು ವಾಚಿಸಿದರೆ ಹೃದಯಕ್ಕೆ ಮುದ ನೀಡುತ್ತದೆ – ಪ್ರೊ. ಎಚ್ ಬಿ ದೇವಣ್ಣ**

ಕೊಳ್ಳೇಗಾಲ 18–09–2017 : ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಸಾಹಿತ್ಯ ಸಂಗಮ ವತಿಯಿಂದ ನಡುಗನ್ನಡ ಕಾವ್ಯ ವಾಚನ, ವ್ಯಾಖ್ಯಾನ ಮತ್ತು ವಿಶ್ವೇಷಣೆ ಕುರಿತು ವಿಶೇಷ ಉಪನ್ಯಾಸವನ್ನು ಹಮ್ಮಿಕೊಂಡಿದ್ದು ಮೈಸೂರಿನ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಗೌರವ ಪ್ರಾಧ್ಯಾಪಕರಾದ ಪ್ರೊ. ಹೆಚ್ ಬಿ ದೇವಣ್ಣ ನವರು ದ್ವಿತೀಯ ಬಿ.ಎ ಮತ್ತು ಬಿ.ಕಾಂ ಬಿ.ಬಿ.ಎ ತರಗತಿಗಳ ಪಠ್ಯಕ್ರಮದ ಆಯ್ದು ಭಾಗಗಳಾದ ಷಟ್ಪದಿಬ್ರಹ್ಮ ರಾಘವಾಂಕನ **“ಹರಿಶ್ಚಂದ್ರ ಕಾವ್ಯ”** ಮತ್ತು ರೂಪಕ ಸಾಮ್ರಾಜ್ಯ ಚಕ್ರವರ್ತಿ ಕುಮಾರವ್ಯಾಸನ **“ಕರ್ಣಾಟ ಭಾರತ ಕಥಾ ಮಂಜರಿ”** ಕಾವ್ಯಗಳನ್ನು ಸುಶ್ರಾವ್ಯವಾಗಿ ಹಾಡಿ, ವಾಚಿಸುವುದರ ಜೊತೆಗೆ ಅದರ ವಿಶ್ಲೇಷಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಮಹಾಭಾರತದಲ್ಲಿ ಬರುವ ಹರಿಶ್ವಂದ್ರೋಪಖ್ಯಾನವನ್ನು ಆಧರಿಸಿ ರಾಘವಾಂಕ ತನ್ನ ಪ್ರತಿಭಾಶಕ್ತಿಯಿಂದ ನಾಟಕೀಯವಾಗಿ ಕಾವ್ಯವನ್ನು ಬರೆದಿದ್ದಾನೆ. ವಸಿಷ್ಠ – ವಿಶ್ವಾಮಿತ್ರರ ಜಗಳದಲ್ಲಿ ಹರಿಶ್ಚಂದ್ರ ಸಿಲುಕಿದನು. ವಿಶ್ವಾಮಿತ್ರನು ಪರೀಕ್ಷೆಯ ಎರಡನೆಯ ಹಂತದಲ್ಲಿ ಚಂಡಾಲ ಕನ್ಯೆಯರನ್ನು ಸೃಷ್ಟಿಸಿ, ಆ ಚಂಡಾಲ ಕನ್ಯೆಯರ ರೂಪ, ಸೌಂದರ್ಯ, ಅವರ ಇಂಪಾದ ಹಾಡು, ನೃತ್ಯಗಳಿಗೆ ಹರಿಶ್ಚಂದ್ರನು ಕೊಡುವ ಉಡುಗೊರೆಯನ್ನು ತಿರಸ್ಕರಿಸಿ, ಮುತ್ತಿನ ಸತ್ತಿಗೆಯನ್ನು ಕೇಳುವುದು, ಆ ಸತ್ತಿಗೆಯ ಮಹತ್ವ, ಗಾನರಾಣಿಯರ ಮತ್ತು ಹರಿಶ್ಚಂದ್ರರ ನಡುವೆ ನಡೆಯುವ ಸಂವಾದದ ಸ್ವಾರಸ್ಯವನ್ನು ರಾಘವಾಂಕ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಹಾಗೆಯೇ ಕನ್ನಡ ಮೇರುಕವಿಗಳಲ್ಲೊಬ್ಬನಾದ ಕುಮಾರವ್ಯಾಸನು ವ್ಯಾಸಭಾರತವನ್ನು ಕನ್ನಡಕ್ಕೆ ತಂದುಕೊಟ್ಟನು ಹೆಚ್ಚು ರೂಪಕಗಳನ್ನು ಬಳಸುವುದರಲ್ಲಿ ಈತನದು ಎತ್ತಿದ ಕೈ. ಪಂಪ ಭಾರತ ಕಲಿತವರ ಕಾಮಧೇನುವಾದರೆ ಕುಮಾರವ್ಯಾಸನ ಭಾರತ ಕಲಿಯದವರಿಗೂ ಕಾಮಧೇನುವಾಗಿದೆ.

ಮಹಾಭಾರತದಲ್ಲಿ ಬಹು ಮುಖ್ಯವಾದುದು ಕೀಚಕವಧೆಯ ಪ್ರಸಂಗ. ಪಾಂಡವರು ಅಜ್ಞಾತವಾಸದ ಸಂದರ್ಭದಲ್ಲಿ ವಿರಾಟ ನಗರಕ್ಕೆ ಬಂದು ವಿವಿಧ ಸೇವಾವೃತ್ತಿಯನ್ನು ಕೈಗೊಂಡರು. ಹಾಗೆ ದ್ರೌಪದಿ ವಿರಾಟ ರಾಜನ ಹೆಂಡತಿ ಸುದೇಷ್ಣೆಯ ಬಳಿ ಸೈರಂಧ್ರಿಯಾಗಿದ್ದಳು. ಸುದೇಷ್ಣೆಯ ತಮ್ಮನಾದ ಕೀಚಕನ ಕಾಮುಕ ದೃಷ್ಟಿ ಸೈರಂಧ್ರಿಯ ಮೇಲೆ ಬೀಳುತ್ತದೆ. ಆಕೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸಿ ಸೋತಾಗ, ಎಲ್ಲರೆದುರು ಒದ್ದು ಅಪಮಾನ ಮಾಡುತ್ತಾನೆ. ಇದರಿಂದ ನೊಂದ ಭೀಮನ ಮೊರೆ ಹೋಗಿ ನಡೆದ ಘಟನೆಯನ್ನೆಲ್ಲಾ ವಿವರಿಸಿ ಕೆರಳುವಂತೆ ಮಾಡಿ ಕೊಲ್ಲಿಸಿದ ದೃಶ್ಯ ಅತ್ಯಂತ ನಾಟಕೀಯವಾಗಿದೆ. ವಿದ್ಯಾರ್ಥಿಗಳು ಇಂತಹ ಕಾವ್ಯಗಳನ್ನು ಓದುವುದರ ಜೊತೆಗೆ ಅದನ್ನು ವಿಶ್ಲೇಷಿಸುವ ಆಲೋಚನಾ ಕ್ರಮವನ್ನು ಬೆಳಿಸಿಕೊಳ್ಳಬೇಕಿದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಉಮೇಶ ಅವರು ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಮುಖ್ಯಸ್ಥರಾದ ಪ್ರೊ ಎಂ ಬಸವರಾಜು ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕರುಗಳಾದ ಶ್ರೀಮತಿ ಸಿ ರೂಪಶ್ರೀ ಸ್ವಾಗತಿಸಿದರೆ ಶ್ರೀ ಎನ್ ಸಂತೋಷ್ ಕುಮಾರ್ ಕಾರ್ಯಕ್ರಮವನ್ನು ನಿರೂಪಿಸಿದರು.

ಕನ್ನಡ ವಿಭಾಗದ ಸಾಹಿತ್ಯ ಸಂಗಮ ವತಿಯಿಂದ ನಡುಗನ್ನಡ, ಕಾವ್ಯ ವಾಚನ ಮತ್ತು ವ್ಯಾಖ್ಯಾನ ಕುರಿತು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಹೆಚ್ ಬಿ ದೇವಣ್ಣರವರಿಂದ ವಿಶೇಷ ಉಪನ್ಯಾಸ. ಚಿತ್ರದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ ಬಸವರಾಜು, ಪ್ರಾಚಾರ್ಯ ಪ್ರೊ. ಉಮೇಶರವರು ಚಿತ್ರದಲ್ಲಿ ಕಾಣಬಹುದು.




ಕನ್ನಡ ವಿಭಾಗದ ಸಾಹಿತ್ಯ ಸಂಗಮ ವತಿಯಿಂದ ನಡುಗನ್ನಡ, ಕಾವ್ಯ ವಾಚನ ಮತ್ತು ವ್ಯಾಖ್ಯಾನ ಕುರಿತು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಹೆಚ್ ಬಿ ದೇವಣ್ಣ ರವರಿಂದ ವಿಶೇಷ ಉಪನ್ಯಾಸ. ಚಿತ್ರದಲ್ಲಿ ಪ್ರೊ. ಎಂ ಬಸವರಾಜು, ಪ್ರೊ. ಉಮೇಶ ರವರನ್ನು ಕಾಣಬಹುದು




ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಧ್ಯಾಪಕ ಮತ್ತು ವಿಧ್ಯಾರ್ಥಿನಿಯರು



18-08-2017